KACM010011242024

Presented on : 23-04-2024
Registered on : 23-04-2024

**IN THE COURT OF**
**PRL. DISTRICT AND SESSIONS JUDGE. CHIKKAMAGALURU**
**AT Chikkamagaluru,CHIKKAMAGALURU**
**(Presided Over by RAVINDRA HEGDE)**
**S.C (SESSION CASES)/42/2024**

Complainant(PROSECUTION):
State by Sakharayapatna Police Station, Rep. by Public Prosecutor, Chikkamagaluru

**VERSUS**

Accused:
Vaggaiah, S/o Late Ningaiah, 50 yrs, Painter, R/o Banuru Village, Kadur Taluk, Chikkamagaluru Dist.

--------------------------------------------------------------------------------

State Complainant}: Public Prosecutor, Chikkamagaluru,
Advocate for accused: P.E. SURESH

--------------------------------------------------------------------------------

**Offence punishable under : 302 of INDIAN PENAL CODE,**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಚಿಕ್ಕಮಗಳೂರು

**S.C. No: 42/2024**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಜಿತೇಂದ್ರಸಿಂಗ್ ನಾಯಕ್ | ಪ್ರಾ.ಸಾ.- 02 |
| ತಂದೆ ಹೆಸರು | : | ಎಲ್.ನರಸಿಂಗ್ ನಾಯಕ್ | ಚಾ.ಸಾ.- 02 |
| ವಯಸ್ಸು | : | 42 ವರ್ಷ | |
| ಉದ್ಯೋಗ | : | ರೆವಿನ್ಯೂ ಇನ್ಸ್ ಪೆಕ್ಟರ್ , ಸಖರಾಯಪಟ್ಟಣ | |
| ವಾಸ ಸ್ಥಳ | : | ಸಖರಾಯಪಟ್ಟಣ | |

**ದಿನಾಂಕ: 04-08-2026**

**<u>ಪ್ರಮಾಣ ವಚನ ಬೋಧಿಸಲಾಯಿತು.</u>**

**<u>(Accused produced from J.C. through V.C. at the remote point of District Prison, Chikkamagaluru)</u>**

**<u>(ಆರೋಪಿಯು ನ್ಯಾಯಾಂಗ ಬಂಧನದಲ್ಲಿದ್ದು, ವಿಸಿಯಲ್ಲಿ ಹಾಜರುಪಡಿಸಿದ್ದು, ನ್ಯಾಯಾಲಯದಿಂದ ಮಾತನಾಡುವುದು ಅಂದರೆ ಸಾಕ್ಷಿದಾರರು ಹೇಳುವುದನ್ನು ಸಹಾ ಕೇಳಿಸಿಕೊಂಡು, ಕೇಳಿಸುತ್ತಿದೆಯೇ ಎಂದು ಆರೋಪಿಗೆ ಕೇಳಲಾಗಿ ಎಲ್ಲವೂ ಕೇಳಿಸುತ್ತಿದೆ ಎಂದು ಹೇಳಿರುತ್ತಾನೆ)</u>**

**<u>ಮುಖ್ಯ ವಿಚಾರಣೆಃ ಶ್ರೀಮತಿ ವೀಣಾ -ಪಿ.ಪಿ.ಯವರಿಂದಃ</u>**

1. 2020 ರಿಂದ ನಾನು ಸಖರಾಯಪಟ್ಟಣದಲ್ಲಿ ರೆವಿನ್ಯೂ ಇನ್ಸ್‌ಪೆಕ್ಟರ್ ಆಗಿ ಕೆಲಸ ಮಾಡುತ್ತಿದ್ದೇನೆ.

2. ನನ್ನ ಊರು ಎಲ್.ಅಗ್ರಹಾರ. ಅದು ಸಖರಾಯಪಟ್ಟಣದಿಂದ 3 ಕಿ.ಮೀ ದೂರ ಆಗುತ್ತದೆ. ಪ್ರಾಸಾ-1 ನನಗೆ ಗೊತ್ತು. ಅವರು ನಮ್ಮ ಊರಿನವರೇ. ಚಾಸಾ-3 ರಮೇಶ ನಮ್ಮ ಪಕ್ಕದ ಊರಿನವರು. ನ್ಯಾಯಾಲಯದ ಮುಂದೆ ವಿಸಿ ಮೂಲಕ ಹಾಜರಿರುವ ಆರೋಪಿ ನಮ್ಮ ಪಕ್ಕದ ಊರಿನವರು. ಮೃತ ಗೌರಿ ಬಾಯಿ ನಮ್ಮ ಊರಿನವರು.

3. ದಿನಾಂಕಃ 14-01-2024 ರಂದು ಭಾನುವಾರ ನಾನು ನಮ್ಮ ತೋಟಕ್ಕೆ ಹೋಗಿದ್ದಾಗ, ನಮ್ಮ ಊರು ಮತ್ತು ನಾಗೇನಹಳ್ಳಿ ಊರಿನ ನಡುವೆ ಇರುವ ಆಂಜನೇಯಸ್ವಾಮಿ ದೇವಸ್ಥಾನದ ಬಳಿ ಕೊಲೆ ಆಗಿದೆ ಎಂದು ತಿಳಿಯಿತು. ಆಗ ನಾನು ಸ್ಥಳಕ್ಕೆ ಹೊರಟೆ. ಅಷ್ಟರಲ್ಲಿ ಸಖರಾಯಪಟ್ಟಣ ಪೊಲೀಸರು ನನಗೆ ಫೋನ್ ಮಾಡಿ, ಕೊಲೆಯಾದ ಸ್ಥಳದಲ್ಲಿ ಇದ್ದ ಸಿಸಿಟಿವಿ ಫೂಟೇಜ್ ನೋಡುವುದಕ್ಕೆ ಬನ್ನಿ ಎಂದು ಕರೆದರು. ನಾನು ಆಂಜನೇಯಸ್ವಾಮಿ ದೇವಸ್ಥಾನದ ಬಳಿ ಹೋದೆ. ಮಧ್ಯಾಹ್ನ 3.45 ರಿಂದ 4.00 ಗಂಟೆ ಸುಮಾರಿಗೆ ನಾನು ದೇವಸ್ಥಾನದ ಬಳಿ ಇದ್ದೆ. ಪೊಲೀಸರು ನಾನು

ಹೋಗುವುದರ ಒಳಗೆ ಸ್ಥಳದಲ್ಲಿ ಇದ್ದರು. ಪೊಲೀಸರು ನನಗೆ ಮತ್ತು ಚಾಸಾ-3- ರಮೇಶ್ ಅವರಿಗೆ ನೋಟೀಸು ಕೊಟ್ಟರು. ಆ ನೋಟೀಸನ್ನು ಈಗ ನೋಡುತ್ತಿದ್ದು, ನೋಟೀಸನ್ನು ನಿ.ಪಿ.10 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿ.ಪಿ.10(ಎ) ಎಂದು ಗುರುತಿಸಲಾಯಿತು.

4. ನಂತರ ದೇವಸ್ಥಾನದ ಕಾರ್ಯದರ್ಶಿ ಚಾಸಾ-4 ತಿಮ್ಮೇಗೌಡ ರವರನ್ನು ಸ್ಥಳಕ್ಕೆ ಕರೆಸಿದರು. ಕಾರ್ಯದರ್ಶಿ ದೇವಸ್ಥಾನದ ಬಾಗಿಲನ್ನು ತೆರೆದರು ಮತ್ತು ದೇವಸ್ಥಾನದ ಫೋಟೋ ಫ್ರೇಮ್ ಒಳಗೆ ಇದ್ದ ಡಿವಿಆರ್ ಅನ್ನು ತೋರಿಸಿದರು. ನಂತರ ಡಿವಿಆರ್ ಅನ್ನು ಪೊಲೀಸರು ತೆಗೆದುಕೊಂಡು ಅದರಲ್ಲಿ ಇರುವ ಸಿಸಿಟಿವಿ ರೆಕಾರ್ಡಿಂಗನ್ನು ನೋಡಬೇಕು ಎಂದು ಹೇಳಿದರು. ಡಿವಿಆರ್ ನಲ್ಲಿಯ ರೆಕಾರ್ಡಿಂಗನ್ನು ಪೊಲೀಸರು ಅವರ ಲ್ಯಾಪ್ ಟಾಪ್ ನಲ್ಲಿ ಹಾಕಿ, ಡೌನ್ ಲೋಡ್ ಮಾಡಿದರು ಮತ್ತು ಅದರಲ್ಲಿ ದಾಖಲಾಗಿದ್ದ ರೆಕಾರ್ಡಿಂಗನ್ನು ನಮಗೆ ತೋರಿಸಿದರು.

5. ಈ ರೆಕಾರ್ಡಿಂಗ್ ನಲ್ಲಿ ರಾತ್ರಿ 10.00 ಗಂಟೆ ಸುಮಾರಿಗೆ ನ್ಯಾಯಾಲಯದ ಮುಂದೆ ವಿಸಿ ಮೂಲಕ ಹಾಜರಿರುವ ಆರೋಪಿ ವಗ್ಗಯ್ಯ ದೇವಸ್ಥಾನಕ್ಕೆ ಬಂದಂತೆ ಕಾಣುತ್ತಿತ್ತು. ಅವರ ಹಿಂದೆ ಮೃತ ಗೌರಿಬಾಯಿ ಸಹಾ ಬರುತ್ತಿದ್ದುದು ರೆಕಾರ್ಡಿಂಗ್ ನಲ್ಲಿ ಕಾಣುತ್ತಿತ್ತು. ವಗ್ಗಯ್ಯನ ಕೈಯಲ್ಲಿ ಎರಡೂ ಕೈಗಳಲ್ಲಿ ಎರಡು ಬ್ಯಾಗ್ ಇತ್ತು. ಇಬ್ಬರೂ ದೇವಸ್ಥಾನದ ಬಳಿ ಕುಳಿತು, ದೇವರಿಗೆ ನಮಸ್ಕರಿಸಿ, ಆ ನಂತರ 2 /3 ನಿಮಿಷ ರೆಕಾರ್ಡಿಂಗ್ ನಲ್ಲಿ ಕಾಣುತ್ತಿರಲಿಲ್ಲ. ಆ ನಂತರ ಸುಮಾರು ರಾತ್ರಿ 11.00/11.15 ಗಂಟೆಗೆ ಇಬ್ಬರೂ ರೆಕಾರ್ಡಿಂಗ್ ನಲ್ಲಿ ಕಾಣುತ್ತಾರೆ. ಇಬ್ಬರೂ ವಾಗ್ವಾದ ಮಾಡುವುದು ಕಾಣುತ್ತದೆ. ಆದರೆ ಕೇಳುವುದಿಲ್ಲ. ವಗ್ಗಯ್ಯನ ಕೈಯಲ್ಲಿ ಮಾಪ್ ಮಾದರಿಯ ಒಂದು ಪೈಪ್ ಇದ್ದಿದ್ದು ರೆಕಾರ್ಡಿಂಗ್ ನಲ್ಲಿ ಕಾಣುತ್ತದೆ. ಆ ಪೈಪ್ ನಿಂದ ಗೌರಿಬಾಯಿಗೆ ವಗ್ಗಯ್ಯ ಹೊಡೆಯುತ್ತಿರುವುದು ಕಾಣುತ್ತದೆ. ಗೌರಿಬಾಯಿಯ ತಲೆಗೆ, ಬೆನ್ನಿಗೆ, ಕೈಗೆ ಮತ್ತು ಮೈಮೇಲೆಲ್ಲಾ ಪೈಪ್ ನಿಂದ ಹೊಡೆಯುವುದು ಕಾಣುತ್ತದೆ. ಹಲ್ಲೆ ತಾಳಲಾರದೆ ಗೌರಿಬಾಯಿ ಅಲ್ಲಿಯೇ ಮಲಗುತ್ತಾರೆ. ನಂತರ ವಗ್ಗಯ್ಯ ಅಲ್ಲಿಂದ ಕ್ಯಾಮರಾ ಕಣ್ಣಿನ ಹೊರಗೆ ಹೋಗುತ್ತಾನೆ. ನಂತರ ಗೌರಿಬಾಯಿ ಸಹಾ ಎದ್ದು ಕ್ಯಾಮರಾ ಕಣ್ಣಿನ ಹೊರಗೆ ಹೋಗುತ್ತಾರೆ.

6. ನಂತರ ಸುಮಾರು 12.50 ರಿಂದ 1.00 ಗಂಟೆಯ ಸುಮಾರಿನ ರೆಕಾರ್ಡಿಂಗ್ ನಲ್ಲಿ ವಗ್ಗಯ್ಯ ಮತ್ತು ಗೌರಿಬಾಯಿ ಇಬ್ಬರೂ ಕಾಮರಾ ಕಣ್ಣಿಗೆ ಕಾಣುತ್ತಾರೆ. ಮತ್ತೆ ಪುನಃ ವಗ್ಗಯ್ಯ ಗೌರಿಬಾಯಿಗೆ ಪೈಪ್ ನಿಂದ ಹೊಡೆಯುತ್ತಾನೆ. ಪೈಪ್ ಮುರಿದು ಹೋಗಿದ್ದು ಕಾಣುತ್ತದೆ. ಗೌರಿಬಾಯಿ ಅಲ್ಲಿ ಮಲಗುತ್ತಾರೆ. ವಗ್ಗಯ್ಯ ಟಾರ್ಚ್ ಹಿಡಿದುಕೊಂಡು ದೇವಸ್ಥಾನದ ಸುತ್ತಾ ಹೋಗುತ್ತಾನೆ. 2 /3 ನಿಮಿಷ ಬಿಟ್ಟು ವಗ್ಗಯ್ಯ ವಾಪಾಸ್ ಬರುತ್ತಾನೆ. ಈಗ ವಗ್ಗಯ್ಯನ ಕೈಯಲ್ಲಿ ಒಂದು ಕಬ್ಬಿಣದ ರಾಡ್ ಇರುವುದು ಸಿಸಿಟಿವಿ ಫೂಟೇಜ್ ನಲ್ಲಿ ಕಾಣುತ್ತದೆ. ನಂತರ ಪುನಃ ಅವರಿಬ್ಬರ ನಡುವೆ ವಾಗ್ವಾದ ಆಗುವುದು ಕಾಣುತ್ತದೆ. ಆ ನಂತರ ವಗ್ಗಯ್ಯ ರಾಡಿನಿಂದ ಗೌರಿಬಾಯಿಯ ತಲೆಗೆ, ಮೈಗೆ ಹೊಡೆಯುತ್ತಾನೆ. ಆ ನಂತರ ಗೌರಿಬಾಯಿ ಅಲ್ಲೇ ಮಲಗುತ್ತಾರೆ. ಸ್ವಲ್ಪ ಸಮಯದ ನಂತರ ವಗ್ಗಯ್ಯ ಕ್ಯಾಮರಾದ ಕಣ್ಣಿನಿಂದ ಹೊರಗೆ ಹೋಗುತ್ತಾರೆ. ಗೌರಿಬಾಯಿ ಸಹಾ ಕ್ಯಾಮರಾದ ಕಣ್ಣಿನಿಂದ ಹೊರಗೆ ಹೋಗುತ್ತಾರೆ. ವಗ್ಗಯ್ಯ ಸ್ಥಳದಿಂದ ಹೋಗಿದ್ದು ಸುಮಾರು ಬೆಳಗಿನ ಜಾವ 1.00 ರಿಂದ 1.10 ಗಂಟೆ ಸಮಯ ಆಗಿರಬಹುದು. ಈ ಎಲ್ಲಾ ರೆಕಾರ್ಡಿಂಗ್ ಗಳು ಡಿವಿಆರ್ ನಿಂದ ಲ್ಯಾಪ್ ಟಾಪ್ ಗೆ ಡೌನ್ ಲೋಡ್ ಮಾಡಿದಾಗ ನಮಗೆ ಕಂಡಿರುತ್ತದೆ.

7. ಈ ರೆಕಾರ್ಡಿಂಗನ್ನು ಲ್ಯಾಪ್ ಟಾಪ್ ನಲ್ಲಿ ಪ್ಲೇ ಮಾಡಿ ತೋರಿಸಿದ ನಂತರ ಈ ರೆಕಾರ್ಡಿಂಗನ್ನು ಒಂದು ಪೆನ್ ಡ್ರೈವ್ ನಲ್ಲಿ ಕಾಪಿ ಮಾಡಿರುತ್ತಾರೆ. ಅದೇ ರೀತಿ ಒಂದು ಸಿಡಿಯಲ್ಲೂ ಸಹಾ ರೆಕಾರ್ಡಿಂಗನ್ನು ಕಾಪಿ ಮಾಡಿರುತ್ತಾರೆ. ನಂತರ ಪೆನ್ ಡ್ರೈವ್ ನ್ನು ಒಂದು ಕವರಿನಲ್ಲಿ ಹಾಕಿ ಅಮಾನತ್ತುಪಡಿಸಿಕೊಂಡು P ಎನ್ನುವ ಸೀಲ್ ನಿಂದ ಸೀಲ್ ಮಾಡಿರುತ್ತಾರೆ. ಆ ಸಮಯದಲ್ಲಿ ಪೊಲೀಸರು ಸಂಜೆ 4.00 ಗಂಟೆಯಿಂದ ಸುಮಾರು 5.15 ಗಂಟೆಯವರೆಗೆ ನಮ್ಮ ಸಮಕ್ಷಮ ಒಂದು ಹೇಳಿಕೆಯನ್ನು ಟೈಪ್ ಮಾಡಿ, ಅದಕ್ಕೆ ನಮ್ಮ ಸಹಿ ತೆಗೆದುಕೊಂಡಿದ್ದಾರೆ. ಈಗ ನೋಡುತ್ತಿರುವ ದಾಖಲೆ ಮೇಲಿರುವ ಸಹಿ ನನ್ನದೇ. ಸಾಕ್ಷಿ ಗುರುತಿಸಿರುವ ಅವರ ಸಹಿ ಇರುವ ದಾಖಲೆಯನ್ನು ನಿ.ಪಿ.11 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿ.ಪಿ.11(ಎ) ಎಂದು ಗುರುತಿಸಲಾಯಿತು. ಈ ಮಹಜರ್ ಸಮಯದಲ್ಲಿ ಫೋಟೋಗಳನ್ನು ಸಹಾ ತೆಗೆದಿದ್ದಾರೆ. 3 ಫೋಟೋಗಳನ್ನು ಈಗ ನೋಡುತ್ತಿದ್ದು, ಈ ಫೋಟೋಗಳನ್ನು ಈ ಸಮಯದಲ್ಲಿಯೇ ತೆಗೆದಿರುತ್ತಾರೆ. ಸಾಕ್ಷಿ ಫೋಟೋಗಳನ್ನು ಗುರುತಿಸಿದ್ದು, ಫೋಟೋಗಳನ್ನು ನಿ.ಪಿ. 12 ರಿಂದ 14 ಎಂದು

ಗುರುತಿಸಲಾಯಿತು. ನಿ.ಪಿ.13 ರ ಫೋಟೋದಲ್ಲಿ ನಾನು ಕಾಣುತ್ತೇನೆ.

8. ಆ ದಿನ ಪೊಲೀಸರು ಅಮಾನತ್ತುಪಡಿಸಿಕೊಂಡ ಪೆನ್ ಡ್ರೈವ್ ನ್ನು ನೋಡಿದರೆ ಗುರುತಿಸುತ್ತೇನೆ. ಅದನ್ನು ಈಗಾಗಲೇ ನಿ.ಪಿ.9 ಎಂದು ಗುರುತಿಸಲಾಗಿರುತ್ತದೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಪಿ ಇ ಎಸ್ ವಕೀಲರಿಂದಃ</u>**

9. ಮೃತ ಗೌರಿಬಾಯಿ ನಮ್ಮ ಜನಾಂಗದವರು, ಆದರೆ ನನ್ನ ಸಂಬಂಧಿಗಳಲ್ಲ. ಸಖರಾಯಪಟ್ಟಣದಿಂದ ಈ ದೇವಸ್ಥಾನ 5 ಕಿ ಮೀ ಆಗುತ್ತದೆ. ನನಗೆ ಪೊಲೀಸರು ನೋಟೀಸನ್ನು ದೇವಸ್ಥಾನದಲ್ಲಿ ಕೊಟ್ಟಿದ್ದಾರೆ. ಆ ದಿನ ಭಾನುವಾರ ಆಗಿದ್ದರಿಂದ ನಾನು ಕಛೇರಿಗೆ ಹೋಗಿರಲಿಲ್ಲ. ನಾನು ಪೊಲೀಸರು ನೋಟೀಸ್ ಕೊಟ್ಟಾಗ ನಾನೊಬ್ಬ ಸರ್ಕಾರಿ ಅಧಿಕಾರಿ ಇರುವುದರಿಂದ ಊರಿನ ಹಿರಿಯರಿಗೆ ನೋಟೀಸ್ ಕೊಡಿ ಎಂದು ಹೇಳಿಲ್ಲ. ನಾನು ನಮ್ಮ ಊರಿನಲ್ಲಿ ಯಾವುದೇ ಪಂಚಾಯ್ತಿದಾರನಲ್ಲ, ಮತ್ತು ಯಾವುದೇ ಟ್ರಸ್ಟ್ ಮತ್ತು ಇತರ ಸಂಘಟನೆಗಳ ಸದಸ್ಯನಲ್ಲ ಎನ್ನುವುದು ಸರಿ.

10. ದೇವಸ್ಥಾನದಲ್ಲಿದ್ದ ಸಿಸಿ ಕ್ಯಾಮರಾ ಯಾವ ಕಂಪನಿಯದು ಎಂದು ನಾನು ಗಮನಿಸಲಿಲ್ಲ. ನಿ.ಪಿ.12 ರ ಫೋಟೋದಲ್ಲಿ ನಾವು ಯಾರೂ ಕಾಣುವುದಿಲ್ಲ ಎನ್ನುವುದು ಸರಿ. ನಿ.ಪಿ.13 ಫೋಟೋದಲ್ಲಿ ದೇವಸ್ಥಾನದ ಕುರುಹುಗಳಿಲ್ಲ ಎನ್ನುವುದು ಸರಿ. ಈ ದೇವಸ್ಥಾನದಲ್ಲಿ ರಾತ್ರಿ ಹೊತ್ತು ಜನ ಇರುವುದಿಲ್ಲ. ದಿನದ ಸಮಯದಲ್ಲಿ ದೇವಸ್ಥಾನದಲ್ಲಿ ಜನ ಇರುತ್ತಾರೆ ಎನ್ನುವುದು ಸರಿ. ನನ್ನ ಮನೆಯಿಂದ ಈ ದೇವಸ್ಥಾನಕ್ಕೆ ಸುಮಾರು 5 ಕಿ ಮೀ ದೂರ ಆಗುತ್ತದೆ. ಈ ದೇವಸ್ಥಾನದಲ್ಲಿ ಬೆಳಿಗ್ಗೆ, ಸಂಜೆ ಪೂಜೆ ನಡೆಯುತ್ತದೆ ಎನ್ನುವುದು ಸರಿ. ದೇವಸ್ಥಾನಕ್ಕೆ ಭಕ್ತಾದಿಗಳು ಬಂದು ಹೋಗಿ ಮಾಡುತ್ತಾರೆ ಎನ್ನುವುದು ಸರಿ. ನಿ.ಪಿ.12 ರಿಂದ 14 ರಲ್ಲಿ ಅಂತಹ ಯಾವುದೇ ಭಕ್ತರು ಕಾಣುವುದಿಲ್ಲ ಎನ್ನುವುದು ಸರಿ. ಪೊಲೀಸರು ಸಂಜೆ 4.00 ಗಂಟೆಗೆ ನನಗೆ ನೋಟೀಸ್ ಕೊಟ್ಟರು. ಪೊಲೀಸರು ಅಲ್ಲಿ ಬಂದ ವಿಚಾರವನ್ನು ನನಗೆ ಊರಿನವರು ಸುಮಾರು 2.30 /3.00 ಗಂಟೆಗೆ ಹೇಳಿದ್ದರು. ನನಗೆ ಆ ಸ್ಥಳಕ್ಕೆ

ಹೋಗುವುದಕ್ಕೆ ಸುಮಾರು 5 ನಿಮಿಷ ಸಾಕಾಗುತ್ತದೆ.

11. ನಾನು ಸ್ಥಳಕ್ಕೆ ಹೋದಾಗ ಅಲ್ಲಿ 2 ಪೊಲೀಸ್ ಜೀಪ್ ಇತ್ತು. ಪೊಲೀಸರು ಮತ್ತು ಬೇರೆ ಜನರು ಇದ್ದರು. ನನಗೆ ಪೊಲೀಸರು ಸ್ಥಳಕ್ಕೆ ಬಂದ ಬಗ್ಗೆ ಊರಿನವರು ಯಾರು ಹೇಳಿದರು ಎಂದು ಹೇಳಲಾಗುವುದಿಲ್ಲ. ಆ ಜನರು ಪೊಲೀಸರು ಬಂದಿದ್ದಾರೆ, ಕರೆಯುತ್ತಿದ್ದಾರೆ ಬನ್ನಿ ಎಂದು ನನಗೆ ಹೇಳಿದರು. ಪೊಲೀಸರಿಗೆ ನನ್ನ ಹೆಸರನ್ನು ಯಾರು ಕೊಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ. ಅಲ್ಲಿ ಬಂದ ಪೊಲೀಸರಲ್ಲಿ ಹೆಡ್ ಕಾನ್ಸ್ ಟೇಬಲ್ ವಸಂತ್ ಎನ್ನುವವರು ಪರಿಚಯ ಇದ್ದರು. ನಾನು ಇದ್ದ ಜಾಗಕ್ಕೆ ಬಂದು ಪೊಲೀಸರು ಮಹಜರಿಗೆ ಬರುವಂತೆ ನನ್ನನ್ನು ಕರೆದಿಲ್ಲ ಎನ್ನುವುದು ಸರಿ. ನಾನು ಸ್ಥಳಕ್ಕೆ ಹೋದಾಗ ಅಲ್ಲಿ ಗ್ರಾಮಸ್ಥರು ಸುಮಾರು 25 ಜನ ಇದ್ದರು. ನಾನು ಹೋಗುವಷ್ಟರಲ್ಲಿ ಅಲ್ಲಿ ಇದ್ದ ಜನ ಪೊಲೀಸರಿಗೆ ದೇವಸ್ಥಾನ ಮತ್ತು ಸ್ಥಳವನ್ನು ತೋರಿಸುತ್ತಿದ್ದರು ಎನ್ನುವುದು ಸರಿ. ಜನ ತೋರಿಸುತ್ತಿದ್ದ ವಿಷಯವನ್ನು ಪೊಲೀಸರು ಬರವಣಿಗೆ ಸಹಾ ಮಾಡುತ್ತಿದ್ದರು ಎನ್ನುವುದು ಸರಿ. ಪೊಲೀಸರು ನಾನು ಹೋಗುವುದರ ಒಳಗೆ ಏನೇನು ಬರೆಯುತ್ತಿದ್ದರು, ಅದೆಲ್ಲಾ ಬರೆದು ದಾಖಲೆ ತಯಾರಿಸಿದ ನಂತರ ನನ್ನನ್ನು ಕರೆದು ಸಹಿ ತೆಗೆದುಕೊಂಡಿದ್ದಾರೆ ಎನ್ನುವುದು ಸರಿಯಲ್ಲ. ಪೊಲೀಸರು ಬರವಣಿಗೆ ಮಾಡುತ್ತಿದ್ದ ದಾಖಲೆ ಯಾರ ಬಳಿ ಉಳಿಯಿತು ಎಂದು ನನಗೆ ಗೊತ್ತಿಲ್ಲ.

12. ನನಗೆ ವಗ್ಗಯ್ಯ ಪರಿಚಯ ಇದ್ದಾರೆ. ನಾನು ನೋಡಿದ ರೆಕಾರ್ಡಿಂಗ್ ನಲ್ಲಿ ಆ ಮಹಿಳೆ ಸ್ಥಳದಲ್ಲೇನು ಸಾಯುವುದು ಕಾಣುವುದಿಲ್ಲ ಎನ್ನುವುದು ಸರಿ. ಅಲ್ಲಿ ಅವರನ್ನು ಹೊಡೆಯಲು ಉಪಯೋಗಿಸಿದ ಪೈಪ್ ಯಾವ ಬ್ರ್ಯಾಂಡ್ ಎಂದು ನನಗೆ ಗೊತ್ತಿಲ್ಲ ಎನ್ನುವುದು ಸರಿ. ಈ ರೆಕಾರ್ಡಿಂಗ್‌ನಲ್ಲಿ ಯಾರೋ ಗಂಡ -ಹೆಂಡತಿ ಅಥವಾ ಬೀದಿಯಲ್ಲಿ ಹೋಗುವವರು ಆ ಸ್ಥಳಕ್ಕೆ ಬಂದಂತೆ ಕಾಣುತ್ತದೆ ಎನ್ನುವುದು ಸರಿ. ನಮ್ಮ ಸಂಪ್ರದಾಯದಲ್ಲಿ ಹೆಣ್ಣುಮಕ್ಕಳು ರಾತ್ರಿ ಸಮಯದಲ್ಲಿ ಪರಪುರುಷನ ಜೊತೆ ಹೋಗುವುದಿಲ್ಲ ಎನ್ನುವುದು ಸರಿ.

13. ಆ ದಿನ ನಾನು ದೇವಸ್ಥಾನದ ಬಳಿ ಹೋಗಿದ್ದಾಗಲೀ, ನನ್ನ ಸಮಕ್ಷಮದಲ್ಲಿ ಡಿವಿಆರ್ ಅನ್ನು ಲ್ಯಾಪ್ ಟಾಪ್ ನಲ್ಲಿ ಪ್ಲೇ ಮಾಡಿ ಪೆನ್ ಡ್ರೈವ್ ನಲ್ಲಿ ಹಾಕಿದ್ದಾಗಲೀ ಇಲ್ಲ ಎನ್ನುವುದು ಸರಿಯಲ್ಲ. ನನ್ನ ಸಮಕ್ಷಮ ಮಹಜರ್ ಅಥವಾ ಬೇರೆ

ದಾಖಲೆಯನ್ನು ಮಾಡಿಲ್ಲ ಎನ್ನುವುದು ಸರಿಯಲ್ಲ.

14. ನನ್ನ ಕಛೇರಿಯಿಂದ ಸುಮಾರು 500 ಮೀಟರ್ ಅಂತರದಲ್ಲಿ ಸಖರಾಯಪಟ್ಟಣ ಪೊಲೀಸ್ ಠಾಣೆ ಇದೆ. ಪೊಲೀಸರು ಕೊಟ್ಟ ನೋಟೀಸಿನ ಪ್ರತಿ ನನ್ನ ಬಳಿ ಇಲ್ಲ. ಪೊಲೀಸರು ನನ್ನನ್ನು ಠಾಣೆಗೆ ಕರೆದು, ನಿ.ಪಿ. 11 ದಾಖಲೆಗೆ ಠಾಣೆಯಲ್ಲಿ ಸಹಿ ತೆಗೆದುಕೊಂಡಿದ್ದಾರೆ ಎನ್ನುವುದು ಸರಿಯಲ್ಲ. ನಿ.ಪಿ.12 ಫೋಟೋದಲ್ಲಿ ದೇವಸ್ಥಾನದಲ್ಲಿ ಸಿಸಿಟಿವಿ ಹಾಕಿದ್ದು ಕಾಣುತ್ತಿಲ್ಲ ಎಂದರೆ ದೇವಸ್ಥಾನದಲ್ಲಿ ಸಿಸಿಟಿವಿ ಇದೆ. ನಿ.ಪಿ.12 ರಿಂದ 14 ಫೋಟೋಗಳಲ್ಲಿ ಸಿಸಿಟಿವಿಯ ರೆಕಾರ್ಡಿಂಗ್ ನ್ನು ಪ್ಲೇ ಮಾಡಿದ್ದು ಕಾಣುವುದಿಲ್ಲ ಎನ್ನುವುದು ಸರಿ. ಆ ಪೆನ್ ಡ್ರೈವ್ sandisc ಕಂಪನಿಯದ್ದಾಗಿರುತ್ತದೆ. ನಿ.ಪಿ.11 ಮಹಜರನ್ನು ಹೀಗೆಯೇ ಬರೆಯಬೇಕು ಎಂದು ನಾನೇನು ಹೇಳಿಲ್ಲ. ಮಹಜರ್ ನಲ್ಲಿ ಮೊಕದ್ದಮೆ ಸಂ. ಎಷ್ಟು ಬರೆದಿದೆ ಎಂದು ಈಗ ನೆನಪಿಲ್ಲ. ನಿ.ಪಿ.11 ರ ಪೂರ್ತಿ ದಾಖಲೆಯನ್ನು ನನಗೆ ನೆನಪಿನಿಂದ ಈಗ ಹೇಳಲಾಗುವುದಿಲ್ಲ ಎನ್ನುವುದು ಸರಿ. ನಾನು ಮಹಜರಿಗೆ ಹಾಜರಿಲ್ಲದಿದ್ದರೂ ಸಹಾ ಮೃತ ವ್ಯಕ್ತಿ ನನ್ನ ಸಂಬಂಧಿಯಾಗಿದ್ದರಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನಾನು ನೋಡಿದ್ದೇನೆ ಎಂದು ಹೇಳುವ ರೆಕಾರ್ಡಿಂಗ್ ನಲ್ಲಿ ನ್ಯಾಯಾಲಯದ ಮುಂದೆ ವಿಸಿ ಮೂಲಕ ಹಾಜರಿರುವ ಆರೋಪಿ ವಗ್ಗಯ್ಯ ಕಾಣುತ್ತಿರಲಿಲ್ಲ ಎನ್ನುವುದು ಸರಿಯಲ್ಲ.

ಮರು ವಿಚಾರಣೆ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ.ಸ.ಇ.ಎ.ಒ.

Sd/-04-08-2026
(ರವೀಂದ್ರ ಹೆಗಡೆ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿ ಸಹಿಃ-

Visit **ecourts.gov.in** for updates or download mobile app “**eCourts Services**” from Android or iOS